# **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.2550/2025**

ಸಿ.ಡಬ್ಲ್ಯು 05

ಪಿ.ಡಬ್ಲ್ಯು 06

ಸಾಕ್ಷಿದಾರರ ಹೆಸರು - **ಲಕ್ಷ್ಮಿ ಕುಮಾರ ಗೌಡಾ**

ಗಂಡನ ಹೆಸರು - ಕುಮಾರ ಮಾಣೇಶ್ವರ ಗೌಡಾ

ವಯಸ್ಸು - 36 ವರ್ಷ

ಉದ್ಯೋಗ - ಕೂಲಿ ಕೆಲಸ

ವಾಸ್ತವ್ಯ - ಗೋಕರ್ಣ, ಬೆಲೆ ಹಿತ್ತಲ

(ಇಂದು ದಿನಾಂಕಃ **29-01-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಆರೋಪಿತರ ಪರಿಚಯ ಇದೆ. ಲಲಿತಾ ಹುಲಿಯಪ್ಪ ಗೌಡಾ ಈಕೆ ನನ್ನ ದೊಡ್ಡಪ್ಪನ ಮಗಳಾಗಿರುತ್ತಾಳೆ. ಆಕೆಯು ಅಪಘಾತದಿಂದ ಮೃತಪಟ್ಟಿರುತ್ತಾಳೆ. ಸದ್ರಿ ಅಪಘಾತದ ಕುರಿತಾಗಿ ನನ್ನನ್ನು ಯಾರೂ ದೂರವಾಣಿ ಕರೆಯನ್ನು ಮಾಡಿರುವುದಿಲ್ಲ. ನನಗೆ ಈ ಪ್ರಕರಣದ ಕುರಿತಾಗಿ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ ಹಾಗೂ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ನಿಪಿ 8 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ನಾನು ಆಸ್ಪತ್ರೆಗೆ ಹೋದಾಗ ಅಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ನಿಪಿ8 ರ ಸಹಿಯನ್ನು ಮಾಡಿರುತ್ತೇನೆ. ಸದ್ರಿ ದಾಖಲಾತಿಯಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿಲ್ಲ. ನಿಪಿ 11 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

**ದಿಃ 29/06/2025 ರಂದು** ನಾನು ಮನೆಯಲ್ಲಿ ಇದ್ದಾಗ ನನ್ನ ಸಂಭಂಧಿಯಾದ ಲಲಿತಾ ಹುಲಿಯಪ್ಪಾ ಗೌಡಾ ಇವರಿಗೆ ಅಪಘಾತ ಆದ ವಿಷಯ ತಿಳಿದು ನಾನು ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ಚಾಸಾ 1 ರವರನ್ನು ವಿಚಾರಿಸಿದಾಗ ಅವರು ದಿನಾಂಕ 29/06/2005 ರಂದು ಮಧಾಹ್ನ ಸುಮಾರು 01-30 ಗಂಟೆಗೆ ಗಂಗಾವಳಿ ಗೋಕರ್ಣ ತದಡಿ ರಸ್ತೆಯ ಮೂಲಕ ಬರುತ್ತಿದ್ದಾಗ, ಹನೇಹಳ್ಳಿ ಘಟಗಿ ರಸ್ತೆಯ ಮೇಲೆ ತಲುಪಿದಾಗ 1ನೇ ಆರೋಪಿತನು ತನ್ನ ಮೋಟಾರ ಸೈಕಲ ನಂಬರ ಕೆಎ 47 ಎಲ್ 6055 ರಲ್ಲಿ ಹಿಂಬದಿಗೆ ಬಿಳಿ ಹಾಗೂ ನೀಲಿ ಬಣ್ಣದಿಂದ ಕೂಡಿದ ಚೂಡಿದಾರ ಧರಿಸಿದ ಲಲಿತಾ ಹುಲಿಯಪ್ಪಾ ಗೌಡಾ ಇವರನ್ನು ಕೂರಿಸಿಕೊಂಡು ತನ್ನ ವಾಹನವನ್ನು ಅತೀ ವೇಗವಾಗಿ ಚಲಾಯಿಸುತ್ತಿದ್ದನ್ನು ನೀಯಂತ್ರಣವನ್ನು ಕಳೆದುಕೊಂಡು ರಸ್ತೆಯ ಬಲಬದಿಗೆ ಮೋಟಾರ ಸೈಕಲನ್ನು ಅಪಘಾತಪಡಿಸಿ, ಮೋಟರ ಸೈಕಲ್ ಸಮೇತ ಬಿದ್ದು ಹಿಂಬದಿ ಸವಾರಳಾದ ಲಲಿತಾ ಗೌಡಾ ಇವರಿಗೆ ತಲೆ ಹಿಂಬದಿ ಬದಿಗೆ ಭಾರೀ ಗಾಯವಾಗಿ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

**C.W.** 05 **P.W.** 06

**ದಿನಾಂಕಃ 29/06/2025 ರಂದು** 1ನೇ ಆರೋಪಿತನ ಅತೀ ವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿ ತನ್ನ ಚಾಲನೆಯ ಮೇಲಿನ ನೀಯಂತ್ರಣವನ್ನು ಕಳೆದುಕೊಂಡು ಅಪಘಾತಪಡಿಸಿದ ಕುರಿತಾಗಿ ಹಾಗೂ ಮೃತ ಲಲಿತಾ ಗೌಡಾ ಇವರ ಶವ ಪಂಚನಾಮೆಯ ಸಂದರ್ಭದಲ್ಲಿ ಹಾಜರ ಇದ್ದ ಕುರಿತಾಗಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು **ನಿ.ಪಿ.13** ಎಂದು ಗುರುತಿಸಲಾಯಿತು.

ನಿ.ಪಿ.13 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದ್ದಿದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ13 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿ ಪರ ಶ್ರೀ. ಪಿ ಎಸ್ ಎನ್ ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆಚ್ಚುವರಿ ಪ್ರ.ದ.ನ್ಯಾ..ದಂ. ಕುಮಟಾ

**C.W.** 05    **P.W.** 06

**(ಈ ಹಂತದಲ್ಲಿ  ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು,  ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

**ಪಾಟೀ ಸವಾಲು –ಆರೋಪಿ ಪರ ಶ್ರೀ        ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ